**ಸಾಕ್ಷಿಯನ್ನು ದಿಃ 04.02.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ.ಎಸ್.ಎಸ್ ವಕೀಲರಿಂದಃ-**

ನಾನು 1 ನೇ ಪ್ರತಿವಾದಿ ವಿರುದ್ಧ ಪದೆ ಪದೆ ಸುಳ್ಳು ಅರ್ಜಿಗಳನ್ನು ಕೊಡುತ್ತಿದ್ದರಿಂದ ಅವರಿಗೆ ಕಿರುಕುಳ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ಅದೆ ರೀತಿ ಅರ್ಜಿ ಕೊಡುತ್ತಿದ್ದ ಕಾರಣ ನಮ್ಮ ಕಿರುಕುಳ ತಾಳಲಾರದೆ ಅಧಿಕಾರಿಗಳು 1 ನೇ ಪ್ರತಿವಾದಿಗೆ ಕಿರುಕುಳ ಕೊಡಲು ಶುರು ಮಾಡಿದರು ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ನಡೆಸುತ್ತಿರುವ ಮಿಲ್ ಜಾಗದಲ್ಲಿ ಅವರ ತಂದೆ 50 ವರ್ಷಗಳ ಹೆಚ್ಚು ಕಾಲದಿಂದಲೂ ನೆಡುಸುತ್ತಿದ್ದರು ಎಂದರೆ ಸರಿ. ಅದರೆ ಅದರಿಂದ ನಮಗೆ ನೋವಾಗುತ್ತಿತ್ತು ಎನ್ನುತ್ತಾರೆ. ಅವರ ಕುಟುಂಬದಲ್ಲಿ ಅದ ವ್ಯವಸ್ಥೆಯಲ್ಲಿ ಸದರಿ ಮಿಲ್ ರಮೇಶ್ ರವರ ಹಿಸ್ಸೆಗೆ ಬಂದಿರುತ್ತದೆ ಎಂದರೆ ನನಗೆ ತಿಳಿದಿಲ್ಲ ಎನ್ನುತ್ತಾರೆ. ರಮೇಶ್ ರವರು ಕುಟುಂಬದ ಸದರಿ ಮಿಲ್ ನಿಂದ ಬಂದ ಆದಾಯದಿಂದ ಜೀವನ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಆಕಸ್ಮಾತ್ ಸದರಿ ಮಿಲ್ ನಿಂತರೆ ಸದರಿ ರಮೇಶ್ ಮತ್ತು ಅವರ ಕುಟುಂಬದವರೆಲ್ಲ ಬೀದಿಗೆ ಬೀಳಬೇಕಾಗುತ್ತದೆ ಎಂದರೆ ಸರಿಯಲ್ಲ.

ನಾನು ಪದೆ ಪದೆ ಸುಳ್ಳು ಅರ್ಜಿಗಳನ್ನು ಕೊಡುತ್ತಿದ್ದರಿಂದ ಅಧಿಕಾರಿಗಳು ಕಿರಕುಳ ಕೊಡಲು ಪ್ರಾರಂಭಿಸಿದ ಕಾರಣ 1 ನೇ ಪ್ರತಿವಾದಿ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ 2 ಮತ್ತು 3 ನೇ ಪ್ರತಿವಾದಿಯ ಮೇಲೆ ರಿಟ್ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಕೊನೆಯದಾಗಿ 2 ಮತ್ತು 3 ನೇ ಪ್ರತಿವಾದಿಯರ ವಿರುದ್ಧ WP No.13923/2020 (Lb-RES) ರಂತೆ ಸಲ್ಲಿಸಿದ್ದರು ಎಂದರೆ ಸರಿ. ಮಾನ್ಯ ಉಚ್ಛ ನ್ಯಾಯಾಲಯವು ಸದರಿ WP ನಲ್ಲಿ 10 HP ಪವರ್ ವರೆಗೂ ಸಂಬಂಧಪಟ್ಟ ಅಧಿಕಾರಿಗೆ ಸಂಪರ್ಕಿಸುವಂತೆ ಆದೇಶ ಹೊರಡಿಸಿತ್ತು ಎಂದರೆ ಸಾಕ್ಷಿ ಅದು ಡಿಸ್ಮಿಸ್ ಆಗಿತ್ತು ಎಂದು ನುಡಿಯುತ್ತಾರೆ. ಅದರಂತೆ 1 ನೇ ಪ್ರತಿವಾದಿ ಹುಣಸೂರಿನ ಚೆಸ್ಕಾಂ ಅಧಿಕಾರಿಗೆ 18 HP ಪವರ್ ಅನ್ನು ಹೊರತು 10HP ಪವರ್ ಅನ್ನು ಸ್ಯಾಂಕ್ಷನ್ ಮಾಡಿ ಕೊಡುವಂತೆ ಅರ್ಜಿ ಕೊಟ್ಟಿದ್ದರು ಎಂದರೆ ಸಾಕ್ಷಿ ಆ ರೀತಿಯ ಅರ್ಜಿ ಕೊಟ್ಟಿರುವ ಬಗ್ಗೆ ನನಗೂ ಸಹ ಒಂದು ಲೆಟರ್ ಕೊಟ್ಟಿರುತ್ತಾರೆ ಅವರು 24 HP ಪವರ್ ನಲ್ಲಿ ಮಿಲ್ ಅನ್ನು

ನಡೆಸುತ್ತಿದ್ದಾರೆ ಎಂದು ನುಡಿಯುತ್ತಾರೆ. ಹಾಗೆ 24 HP ಪವರ್ ನಲ್ಲಿ ಮಿಲ್ ಅನ್ನು ನಡೆಸುತ್ತಿದ್ದಾರೆ ಎಂಬ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ಆದರೆ ದಾಖಲೆಯನ್ನು ಕೊಡಬಾರದೆಂದು 1 ನೇ ಪ್ರತಿವಾದಿ ಚೆಸ್ಕಾಂ ಅಧಿಕಾರಿಗೆ ತಿಳಿಸಿದ ಕಾರಣ ಆ ರೀತಿಯ ದಾಖಲೆ ನನಗೆ ಸಿಕ್ಕಿಲ್ಲ ಎನ್ನುತ್ತಾರೆ. ಚೆಸ್ಕಾಂ ಅಧಿಕಾರಿ ಅರ್ಜಿಯನ್ನು ಬರೆದು ಸದರಿ ದಾಖಲೆಯನ್ನು ಕೊಡುವಂತೆ ಕೇಳಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಆ ರೀತಿಯ ಅರ್ಜಿ ಕೊಟ್ಟಾಗಲೆ ಮೇಲೆ ಹೇಳಿದ ಹಾಗೆ 1 ನೇ ಪ್ರತಿವಾದಿ ಚೆಸ್ಕಾಂ ಅಧಿಕಾರಿಗೆ ದಾಖಲೆ ಕೊಡಬಾರದು ಎಂದು ತಿಳಿಸಿರುತ್ತಾರೆ ಎನ್ನುತ್ತಾರೆ. ಆ ರೀತಿಯ ಅರ್ಜಿ ಕೊಟ್ಟ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ಈಗಲೂ ಕೂಡ 1 ನೇ ಪ್ರತಿವಾದಿ ಸ್ಯಾಂಕ್ಷನ್ ಆದಂತಹ ಕೇವಲ 10 HP ಪವರ್ ನಲ್ಲಿ ಮಿಲ್ ನಡೆಸುತ್ತಿದ್ದಾರೆ ಎಂದರೆ ಸರಿಯಲ್ಲ. ಅವರ ನಡುವಿನ ದ್ವೇಷಕ್ಕೆ ಯಾವುದೆ ವಿಷಯ ಗೊತ್ತಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮಿಲ್ ನಿಂದ ಯಾವುದೆ ವಾಯು ಮಾಲಿನ್ಯ ಆಗಲಿ, ಶಬ್ದ ಮಾಲಿನ್ಯ ಆಗುತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಮಿಲ್ ನಡೆಸುತ್ತಿದ್ದರಿಂದಲೇ ಬಿಲ್ಡಿಂಗ್ ಡ್ಯಾಮೇಜ್ ಆಗಿದೆ ಎನ್ನುವುದು, ನನ್ನ ಯಜಮಾನರು ಸದರಿ ಮಿಲ್ ನಡೆಸುತ್ತಿರುವುದರಿಂದಲೇ ತೀರಿಕೊಂಡಿದ್ದಾರೆ ಎಂದು ಹೇಳಿರುವುದು, ಹಾಗೂ 1 ನೇ ಪ್ರತಿವಾದಿ ಪರಿಹಾರ ಕೊಡಬೇಕು ಎಂಬುದು ನನ್ನ ಕಲ್ಪನೆ ಎಂದರೆ ಸರಿಯಲ್ಲ.

ಹುಣಸೂರು ಪಟ್ಟಣದ ವಿವಿಧ ವಸತಿ ಬಡಾವಣೆಗಳಲ್ಲಿ ಸುಮಾರು 20 ಮಿಲ್ ಗಳು ಇವೆ ಎಂದರೆ ಸಾಕ್ಷಿ ಅವರಿಗೆ ನೋವಾಗುತ್ತಿಯೊ ಇಲ್ಲವೊ ಗೊತ್ತಿಲ್ಲ ಅದರೆ ನನಗೆ ನೋವಾಗುತ್ತಿದೆ ಎಂದು ನುಡಿದು ಸಾಕ್ಷಿ 20 ಮಿಲ್ ಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹಾಗೆ ವಸತಿ ಬಡಾವಣೆಗಳಲ್ಲಿ ಇರುವ ನಾಗರಿಕರು ಮಿಲ್ ಗಳಿಂದ ತೊಂದರೆ ಆಗುತ್ತಿದೆ ಎಂದು ಕಂಪ್ಲೆಂಟ್ ಕೊಟ್ಟಿಲ್ಲ ಎಂದರೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಾವಾ ಬಿ. ಷಡ್ಯೂಲ್ ಆಸ್ತಿಯಲ್ಲಿ ಕೇವಲ 10 HP ಪವರ್ ಮೋಟಾರ್ ಮಾತ್ರ ಇನ್ಸಾಲ್ ಆಗಿದೆ ಎಂದರೆ ಸರಿಯಲ್ಲ. ಈಗ ಯಾವುದೆ ದೂಳು (ಡಸ್ಟ್) ಬರದ ಹಾಗೆ ಸೇಫ್ಟಿ ಮೇಜಿಸ್ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಆದರೂ ಸಹ ದೂಳು ಬರುತ್ತಿದೆ ಎಂದು ನುಡಿಯುತ್ತಾರೆ. ಅಲ್ಲಿ ಶಬ್ದ ಪರಿಮಿತಿ ಒಳಗೆ ಇರುತ್ತದೆ ಎಂದರೆ

ಸರಿಯಲ್ಲ. ಮಿಲ್ ಅನ್ನು ಈಗಲೆ ನೀಲ್ಲುವಂತೆ ಕೋರಿ ಸಲ್ಲಿಸಿದ ಅರ್ಜಿಯೂ ವಜಾ ಆಗಿದ್ದು, ಅದರ ಮೇಲೆ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅಪೀಲ್ ನಲ್ಲಿ ಇದುವರೆಗೂ ಮುಂದುವರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಮನೆ ಸದರಿ ಮಿಲ್ ನಡೆಸುತ್ತಿರುವುದರಿಂದಲೇ ಡ್ಯಾಮೆಜ್ ಆಗಿರುತ್ತದೆ ಎಂದು ಯಾವುದೆ ವ್ಯಕ್ತಿಯಿಂದ ಆಗಲಿ, ಇಲಾಖೆಯಿಂದ ಆಗಲಿ ವರದಿ ಪಡೆದು ಸಲ್ಲಿಸಿದ್ದಿರಾ ಎಂದರೆ ಸಾಕ್ಷಿ ಎಲ್ಲಾ ಕಛೇರಿಗೆ ಅಂದರೆ ಪಿ.ಡಬ್ಲ್ಯೂ.ಡಿ ರವರಿಂದ, ಪ್ರೈವೇಟ್ ಇಂಜಿನಿಯರ್ ಕಛೇರಿಗಳಿಗೆ ಹೋಗಿ ವಿಚಾರಿಸಿದ್ದು, ಅವರು ಆ ರೀತಿ ನ್ಯಾಯಾಲಯದಿಂದಲೇ ಬರಬೇಕು ಎಂದು ಹೇಳಿದ್ದರು. ಆ ಬಗ್ಗೆ ಯಾವುದೆ ಹಿಂಬರಹ ನೀಡಿಲ್ಲ.

ನನ್ನ ಯಜಮಾನರು ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ತೀರಿಕೊಂಡಿರುತ್ತಾರೆ. ನನ್ನ ಯಜಮಾನವರು ಪರೀಕ್ಷಿಸಿದ ವೈಧ್ಯರು ಯಾರೆಂದು ಈಗ ನನಗೆ ನೆನಪಿಲ್ಲ. ನನ್ನ ಯಜಮಾನರು ಆಸ್ಪತ್ರೆಯಲ್ಲಿ 10 ದಿನಗಳ ಕಾಲ ಇದ್ದರು. ಅವರು ಡಿಸ್ಚಾರ್ಜ್ ರಿಪೋರ್ಟ್, ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅವರಿಗೆ ಚಿಕಿತ್ಸೆ ಕೊಡಿಸಿದ ಬಗ್ಗೆ ಯಾವುದೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ನನಗೆ ಇಬ್ಬರು ಮಕ್ಕಳು. ಒಬ್ಬರು 32 ವರ್ಷ ವಯಸ್ಸಿನವರು, ಇನ್ನೋಬ್ಬರು 29 ವರ್ಷದವರು. ಒಬ್ಬರು ಬಿ.ಕಾಂ, ಮತ್ತೋಬ್ಬರು ಡಿಪ್ಲೋಮಾದಲ್ಲಿ ಡಿಗ್ರಿ ಮಾಡಿರುತ್ತಾರೆ. ನನ್ನ ಮಕ್ಕಳೆಲ್ಲಾ ದಾವಾ ಎ ಷಡ್ಯೂಲ್ ಸ್ವತ್ತಿನ ಮನೆಯಲ್ಲಿ ಹುಟ್ಟಿ ಬೆಳೆದಿರುವುದು ಎಂದರೆ ಸರಿ. ನನ್ನ ಗಂಡ ಮತ್ತು ಮಾವ ಇಬ್ಬರೂ ಅಕ್ಕಸಾಲಿಗ ವೃತ್ತಿ ಮಾಡುತ್ತಿದ್ದರು ಎಂದರೆ ಸರಿ. ದಾವಾ ಎ ಷಡ್ಯೂಲ್ ಸ್ವತ್ತಿನ ಮನೆಯ ಮುಂಭಾಗದ ಮಳಿಗೆಯಲ್ಲಿ ಸದರಿ ಅಕ್ಕಸಾಲಿಗ ವೃತ್ತಿ ಮಾಡುತ್ತಿದ್ದರು ಎಂದರೆ ಸರಿ. ಮಾವ ತೀರಿಕೊಂಡ ನಂತರ ನನ್ನ ಗಂಡ ಅದೆ ಮಳಿಗೆಯಲ್ಲೆ ವೃತ್ತಿ ಮುಂದುವರೆಸಿದರು ಎಂದರೆ ಮಾವ ಮತ್ತು ಗಂಡ ಮೊದಲು ಬೇರೆ ಮಳಿಗೆಯಲ್ಲಿ ಮಾಡುತ್ತಿದ್ದು, 1994 ರಿಂದ ದಾವಾ ಎ ಷಡ್ಯೂಲ್ ಸ್ವತ್ತಿನ ಮನೆಯ ಮುಂದಿನ ಮಳಿಗೆಯಲ್ಲಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಚಿನ್ನ ಮತ್ತು ಬೆಳ್ಳಿಯ ಒಡವೆಗಳಿಗೆ ಪಾಲಿಶ್ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಆ ಸಂಬಂಧ ಇಜ್ಜಿಲು ಇರುವ ಸ್ಟೋ ಇಟ್ಟುಕೊಂಡು ಕೊಳವೆ ಮೂಲಕ ಊದಿಕೊಂಡು ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ, ಅವರು ಪಾಲಿಶ್ ಮಾಡುತ್ತಿರಲ್ಲ, ಮೇಕಿಂಗ್ ಕೆಲಸ ಮಾಡುತ್ತಿದ್ದರು ಎನ್ನುತ್ತಾರೆ. ನನ್ನ ದಾವೆ

ದುರುದ್ದೇಶ ಪೂರಿತವಾದದ್ದು ಎಂದರೆ ಸರಿಯಲ್ಲ, ನ್ಯಾಯಯುತವಾದದ್ದು ಎನ್ನುತ್ತಾರೆ. ದಾವೆಯಲ್ಲಿ ಕೇಳಿದ ಯಾವುದೆ ಪರಿಹಾರ ಪಡೆಯಲು ನಾನು ಅರ್ಹಳಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವಂತಹ ದಾಖಲೆಗಳನ್ನು 1 ನೇ ಪ್ರತಿವಾದಿಯ ತಪ್ಪು ತೋರಿಸುವಂತಹ ದಾಖಲೆಗಳು ಅಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 2 ನೇ ಪ್ರತಿವಾದಿ ಏಕಪಕ್ಷೀಯಃ**

**ಪಾಟೀ ಸವಾಲು ಃ** 3 ನೇ ಪ್ರತಿವಾದಿ ಪರ ಶ್ರೀ ಎಂ.ಬಿ.ಸಿ ವಕೀಲರ ಪರವಾಗಿ ಶ್ರೀ ಕೆ.ಆರ್.ಜಿ ವಕೀಲರು ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.